# ಈಗ ನಾವೆಲ್ಲ ಒಟ್ಟಿಗೇ ನಿಟ್ಟುಸಿರು ಬಿಟ್ಟು ನಿರಾಳ ಯಾಕಾಗಬಾರದು?

■ ಸ. ರಘುನಾಥ
ಕಲಾಕೃತಿ: ಡಿ.ಎಸ್. ಚೌಗಲೆ




ಕಾಡು ಹುಟ್ಟಿದ್ದಕ್ಕೆ ನಾಡು ಹುಟ್ಟಿತ, ನಾಡು ಹುಟ್ಟಲೆಂದೇ ಕಾಡು ಹುಟ್ಟಿತ? ನಾಡು ಕಾಡಿನತ್ತ ಬೆಳೀತ, ಕಾಡು ನಾಡಿನತ್ತ ಬೆಳೀತ? ನಾಡಿನಿಂದ ಕಾಡು ಅಳೀತ, ಕಾಡಾಗಿದ್ದಕ್ಕೇ ಅದು ಅಳೀತ? ಹೇಳೋಕಂತ ಇತಿಹಾಸದ ಗ್ರಂಥಗಳನ್ನ ರಾಶಿ ಹಾಕಿಕೋಬೇಕ? ನಾಡು ಬೆಳೀತು, ಕಾಡು ಅಳೀತು ಅನ್ನೋದಕ್ಕೆ ಟೇಪು ಹಿಡೀಬೇಕ? ಕಣಿ ಕೇಳೋ ಹಾಗೆ ಮೋಜಿಣಿದಾರನ್ನ ಕರೆಸಿ ಕೇಳಬೇಕ?

ಪ್ರಶ್ನೆಗಳನ್ನು ಸುರೀತ, ಎಲ್ಲಾ ಪ್ರಶ್ನೆಗಳನ್ನು ನೆನಪಿಟ್ಟುಕೊಂಡು ಉತ್ತರಿಸುವುದಕ್ಕೆ ಗೊಂದಲಪಡಿಸುವ, ಕೊಟ್ಟ ಉತ್ತರ ಯಾವ ಪ್ರಶ್ನೆಗೆಂದು ಹುಡುಕಿಕೊಳ್ಳುವಂತೆ ಮಾಡುವ ಜಾಯಮಾನದ ನರಸಿಂಗರಾಯ, ಇನ್ನೊಬ್ಬರ ಗೊಂದಲದಲ್ಲಿ ಖುಷಿಪಡುವ ವಿಕೃತ ಮನಸಿಗನಲ್ಲ. ಅವನ ಮಾತಿನ ವರಸೆಯೇ ಹಾಗೆ. ಉತ್ತರ ತೋಚದೆ ನೀನೇ ಹೇಳು ಅನ್ನುವುದು ಪ್ರಶ್ನೆಗಳ ಸಿಕ್ಕಿನಲ್ಲಿ ಸಿಲುಕಿಕೊಂಡವರಿಗೆ ಸಾಧ್ಯವಾಗದು. ಹಾಗೂ ಕೇಳಿದರೆ, ಅವನು ತನ್ನ ಒಂದೊಂದೂ ಪ್ರಶ್ನೆಯನ್ನು ಪುನರಾವರ್ತಿಸಿ ಕೊಡುವ ಸುದೀರ್ಘ ಉತ್ತರವನ್ನು ಕೇಳುವ ವ್ಯವಧಾನವಾಗಲಿ, ಸಹನೆಯಾಗಲಿ ಇರುವುದಿಲ್ಲ. ಇದನ್ನು ಅವನು ನಿರೀಕ್ಷಿಸುವವನೂ ಅಲ್ಲ. ಪ್ರಶ್ನೆ ಮನಸ್ಸಿನಲ್ಲಿದ್ದರೆ ಯಾವಾಗಲೋ ಉತ್ತರಿಸಿಕೊಳ್ಳುತ್ತಾರೆ ಎನ್ನುವ ಧೋರಣೆ ಅವನದು. ಹತ್ತನೇ ತರಗತಿಯವರೆಗೆ ನರಸಿಂಗರಾಯನ ಪಕ್ಕದಲ್ಲಿಯೇ ಕುಳಿತ, ಇಂದಿಗೂ ಅವನ ಪರಮಾಪ್ತ ದೋಸ್ತನಾಗೇ ಇರುವ ವರದಪ್ಪ, ಶಾಲೆಯಲ್ಲಿ ಓದಿದ್ದ ಕುಮಾರವ್ಯಾಸನ ಪದ್ಯವನ್ನು ನೆನೆಸಿಕೊಂಡು, ತನ್ನಂತಹವರಿಗೆ, ಹಾಗೆಯೇ ನರಸಿಂಗರಾಯನಿಗೂ 'ತಿಣುಕುವನೇನೋ ಫಣಿರಾಯ ನರಸಿಂಗನ ಪ್ರಶ್ನೆಗಳ ಭಾರದಲಿ' ಎಂದು ಹೇಳುತ್ತಿದ್ದ.

ನರಸಿಂಗರಾಯನ ಪ್ರಶ್ನೆಗಳೇ ಅವನ ಕಾಳಜಿಯ ಜೀವಂತಿಕೆ ಅನ್ನುವುದು ವರದಪ್ಪನ ತರಹದವರ ಅಭಿಪ್ರಾಯ. 'ಅದೇನಲ್ಲ. ಪ್ರಶ್ನೆಗಳನ್ನು ಹುಟ್ಟಿಸುವುದು ಅವನ ಜಾಡ್ಯ' ಅನ್ನುವ ವಾದಿಗರುಂಟು. ಇದಕ್ಕೆ ಬೆಂಬಲ ಕಡಿಮೆ. ಇಷ್ಟು ಪ್ರಶ್ನೆಗಳು ಅವನಲ್ಲಿ ಹೇಗೆ ಹುಟ್ಟುತ್ತವೆ ಎಂಬ ಬೆರಗಂತೂ ಎಲ್ಲರದು. ಈ ಬೆರಗು ಮಲಿಯಪ್ಪನಹಳ್ಳಿಯವರಿಗೆ ಮಾತ್ರವೇ ಸೀಮಿತವಲ್ಲ. ಪಕ್ಕದ ಊರಿನ ಶಾಲೆಗೆ ಹೋಗುವ ಆವೂರಿನ ಮಕ್ಕಳ ಮೇಷ್ಟ್ರುಗಳಿಗೂ ಇತ್ತು. ತರಗತಿಯಲ್ಲಿ ಆ ಊರಿನ ಮಕ್ಕಳೇನಾದರು ಎದ್ದು ನಿಂತರೆ ನರಸಿಂಗರಾಯ ನೆನಪಾಗಿಬಿಟ್ಟು, ಕ್ಷಣವಾದರೂ ಅಳುಕುತಿದ್ದರು. ಎಲ್ಲ ಮಕ್ಕಳೂ ಅಲ್ಲದಿದ್ದರೂ ಕೆಲವರಲ್ಲಿ ನರಸಿಂಗರಾಯನ ವಾರಸುದಾರಿಕೆಯ ಲಕ್ಷಣಗಳನ್ನು ಆ ಮೇಷ್ಟ್ರುಗಳು ಕಂಡಿದ್ದರು. ಅವರಲ್ಲಿ ಕೆಲವರು ಮನೆಗಳಲ್ಲಿ ಕುಳಿತು ಮುಂದೆ ಮಾಡಲಿರುವ ಪಾಠಗಳನ್ನು ಶ್ರದ್ಧಾವಂತ ವಿದ್ಯಾರ್ಥಿಯಂತೆ ಓದಿ, ಸಿದ್ಧರಾಗಿ ತರಗತಿಗಳಿಗೆ ಹೋಗುತ್ತಿದ್ದುದಂತೂ ನರಸಿಂಗರಾಯನಾಣೆಗೂ ನಿಜ. ಇದರ ಅನುಕೂಲ ಅವರಿಗೂ ಮಕ್ಕಳಿಗೂ ಆಗುತ್ತಿದ್ದು ನರಸಿಂಗರಾಯ ಆ ಮಕ್ಕಳಿಗೆ ಕೊಡುತ್ತಿದ್ದ ಪ್ರಶ್ನಿಸುವ ತರಬೇತಿಯಿಂದ.

ಎಲೆಗಳ ಮೇಲೆ ನೀರು ಹಾಕಿದರೂ ಗಿಡ ಒಣಗುತ್ತೆ ಏಕೆ? ಮರ ಚಿಗುರೋದು ಯಾಕೆ? ಹಣ್ಣು ಕಾಯಿಗಳಿಂದ ನಮಗೆ ಉಪಯೋಗ. ಆದರೆ ಅವುಗಳಿಂದ ಗಿಡಮರಗಳಿಗೇನು